# ಬನಹಟ್ಟಿ ನೇಕಾರಿಕೆ: ಒಂದು ಅವಲೋಕನ

**ಸಂಗಮೇಶ ಕಚ್ಚು[1] & ಎಂ.ಎನ್. ಬೆನ್ನೂರ[2]**

[1]ಎಂ.ಎ. ಪಿಜಿ ಡಿಪ್ಲೋಮ ಇನ್ ಆರ್ಕೈವಲ್ ಮೋಡಿ ಸ್ಟಡಿಸ್.

[2]ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಕಾಲೇಜು, ಬನಹಟ್ಟಿ.

DOI: https://doi.org/10.5281/zenodo.17013648

## ABSTRACT:

ಬನಹಟ್ಟಿ ನೇಕಾರಿಕೆಯ ತವರೂರು ಆಗಿದೆ. 'ಬನ' ಎಂದರೆ ಬಣ್ಣ, 'ಹಟ್ಟಿ' ಎಂದರೆ ವಾಸಿಸುವ ಸ್ಥಳ. ಹೀಗಾಗಿ, ಬನಹಟ್ಟಿಯನ್ನು ಬಣ್ಣಗಳ ತವರೂರು ಎಂದು ಕರೆಯಲಾಗಿದೆ. ಇಲ್ಲಿ ಕೈಮಗ್ಗಗಳು ಮತ್ತು ಪವರ್ ಲೂಮ್ ಸಹ ಇವೆ. ಜೊತೆಗೆ ನೂಲಿನ ಗಿರಣಿ ಸಹ ಇದೆ. ಬನಹಟ್ಟಿಯಲ್ಲಿ 4500 ನೇಕಾರ ಕುಟುಂಬಗಳಿವೆ. 21 ನೇಕಾರ ಸಹಕಾರಿ ಸಂಘಗಳಿವೆ. ಬನಹಟ್ಟಿಯಲ್ಲಿ ಅಂಚಿನ ವಿನ್ಯಾಸ ಸೀರೆ, ನಕ್ಷತ್ರ ಚಿತ್ರ ಸೀರೆ, ಚೆಸ್ (ಚದುರಂಗ) ವಿನ್ಯಾಸ ಸೀರೆ ಅಲ್ಲದೆ, 200ಕ್ಕೂ ಅಧಿಕ ವಿನ್ಯಾಸದ ಕಾಟನ್ ಸೀರೆ ತಯಾರಾಗುತ್ತವೆ. ಬನಹಟ್ಟಿಯಲ್ಲಿ ದೇವಾಂಗ, ಕುರುಹಿನಶೆಟ್ಟಿ, ಸ್ವಕುಳಸಾಲಿ, ಪದ್ಮಸಾಲಿ, ಶಿವಸಾಮಾಸಾಲಿ, ಪಟ್ಟಸಾಲಿ, ಪಟ್ಟೇಗಾರ, ತೊಗಟವೀರ ಹೀಗೆ ಹಲವಾರು ಪಂಗಡಗಳಿವೆ. ಬನಹಟ್ಟಿಯಲ್ಲಿ ತಯಾರಾಗುವ ಸೀರೆಗಳು ಕರ್ನಾಟಕದ ಮೈಸೂರು, ದಕ್ಷಿಣಕನ್ನಡ, ಬೆಂಗಳೂರು, ರಾಯಚೂರು, ಮಂಗಳೂರು ಈ ಸ್ಥಳಗಳಲ್ಲಿ ವ್ಯಾಪಾರ ಹೊಂದಿವೆ. ನಂತರದಲ್ಲಿ, ಮಹಾರಾಷ್ಟ್ರದ ಸಾಂಗ್ಲಿ, ಮಿರಜ್, ಪುಣೆ, ಮುಂಬೈ ಈ ಸ್ಥಳಗಳಲ್ಲಿ ಸಹ ವ್ಯಾಪಾರ ವಹಿವಾಟು ಇದೆ. ಬನಹಟ್ಟಿಯಲ್ಲಿ ನೇಕಾರ ಸಹಕಾರಿ ಸಂಘಗಳಿವೆ. ಇವುಗಳು ನೇಕಾರರಿಗೆ ಹಲವಾರು ಸೌಲಭ್ಯಗಳನ್ನು ನೀಡಿವೆ. ಅಂದರೆ, ಆರೋಗ್ಯ ವಿಮೆ, ಮಗ್ಗಗಳನ್ನು ಕೊಂಡುಕೊಳ್ಳಲು ಸಾಲದ ರೂಪದಲ್ಲಿ ಹಣ ನೀಡುತ್ತವೆ, ನೇಕಾರರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಾಲವನ್ನು ನೀಡುತ್ತವೆ. ಅಲ್ಲದೆ, ಬ್ರಿಟಿಷ್ ಕಾಲದಿಂದಲೂ ಮತ್ತು ಜಮಖಂಡಿ ಪಟ್ಟವರ್ಧನ್ ಆಳ್ವಿಕೆ ಕಾಲದಿಂದಲೂ ನೇಕಾರಿಕೆ ಇತಿಹಾಸ ಒಳಗೊಂಡಿದೆ.

## KEYWORDS:

ಭೀಮ್, ಬಾಬಿನ್, ದೇವಾಂಗ, ರೋಕಡಿ ನೇಕಾರ, ಪಟ್ಟೇಗಾರ, ಸ್ವಕುಳಸಾಲಿ.

**ಪ್ರಸ್ತಾವನೆ:**

ಇಂದು ನೇಕಾರಿಕೆಯು ಮಹತ್ವದ ಉದ್ಯಮಗಳಲ್ಲಿ ಒಂದಾದರೂ, ಅದು ಮೂಲದಲ್ಲಿ ಜನಪದ ಕಲೆಯಾಗಿತ್ತು. ಭಾರತವು ಸಂಪ್ರದಾಯದ ತವರಾಗಿದ್ದು, ಇದು ವಿಶಾಲವಾದ ಐತಿಹಾಸಿಕ ಚರಿತ್ರೆಯನ್ನು ಹೊಂದಿದೆ. ಪ್ರತಿಯೊಬ್ಬ ಮನುಷ್ಯನ ಗೌರವ ಕಾಪಾಡುವ ಬಟ್ಟೆಯನ್ನು ನೇಯುವ ಕಾಯಕದಲ್ಲಿ ತೊಡಗಿರುವವರೇ ನೇಕಾರರು. ಇವರು ದೇವಾನುದೇವತೆಗಳಿಗೆ ಮೊಟ್ಟ ಮೊದಲ ಬಾರಿಗೆ ಬಟ್ಟೆಯನ್ನು ಉಡಿಸಿದ್ದಾರೆನ್ನುವುದು ಪುರಾಣಗಳ ಮೂಲಕ ತಿಳಿದು ಬರುತ್ತದೆ. ಈ ದೇಶದಲ್ಲಿ ಹಲವಾರು ಜನರು ತಮ್ಮ ಉಪಜೀವನಕ್ಕಾಗಿ ವಿವಿಧ ರೀತಿಯ ಕರಕುಶಲತೆ, ಗೃಹ ಕೈಗಾರಿಕೆ ಹಾಗೂ ಸಣ್ಣ ಗುಡಿ ಕೈಗಾರಿಕೆಗಳ ಮೇಲೆ ಅವಲಂಬಿತರಾಗಿರುವುದನ್ನು ನೋಡುತ್ತೇವೆ. ಅಂದರೆ, ನೇಕಾರಿಕೆ, ಬಡಿಗ, ಕುಂಬಾರ, ಚಮ್ಮಾರ, ಹೀಗೆ ಹಲವಾರು ವೃತ್ತಿಗಳು ಭಾರತದಲ್ಲಿವೆ.

**ನೇಕಾರಿಕೆ ಐತಿಹಾಸಿಕ ಹಿನ್ನಲೆ:**

ಭಾರತ ದೇಶದ ಕೈಮಗ್ಗ ಉದ್ದಿಮೆಯು ವಿಶಾಲ ವ್ಯಾಪ್ತಿ ಒಳಗೊಂಡಿದ್ದು, ಇದೊಂದು ಅಸಂಘಟಿತ ಆರ್ಥಿಕ ಚಟುವಟಿಕೆಯಾಗಿದೆ. ಕೈಮಗ್ಗ ಉತ್ಪಾದನೆಯಲ್ಲಿ ಪುರುಷರಿಗಿಂತಲೂ ಮಹಿಳೆಯರು ಹೆಚ್ಚಿನ ಪಾಲನ್ನು ಹೊಂದಿರುವುದನ್ನು ನೋಡುತ್ತೇವೆ. ಇಲ್ಲಿ ಕೆಲವು ವಿಶೇಷ ಕೈಮಗ್ಗಗಳಿಂದ ವಿಭಿನ್ನ ರೀತಿಯ ಸೀರೆಗಳು ಸಿದ್ಧವಾಗುತ್ತವೆ. ಇಂತಹ ಕೆಲವು ವಿನ್ಯಾಸದ ಸೀರೆಗಳನ್ನು ಮಾಡಲು ಕೈಮಗ್ಗ ಹೊರತುಪಡಿಸಿ ಬೇರೆಯಾದ ಮಗ್ಗದಿಂದ ಮಾಡಲು ಸಾಧ್ಯವಾಗುವುದಿಲ್ಲ. ಕೈಮಗ್ಗ ಉದ್ದಿಮೆಯು ಭಾರತದಲ್ಲಿ ಬೃಹತ್ ಗುಡಿ ಕೈಗಾರಿಕೆಯಾಗಿದ್ದು, 2011ರ ಜನಗಣತಿಯ ಪ್ರಕಾರ, ಭಾರತದಲ್ಲಿ 23.77 ಲಕ್ಷ ನೇಕಾರರಿದ್ದಾರೆ. ಭಾರತೀಯ ಕೈಮಗ್ಗ ಉದ್ಯಮವು ಬಹಳ ವಿಶಾಲವಾದ ವಿದ್ಯಮಾನವಾಗಿದೆ. ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳಲ್ಲಿ ಇದರ ಪುರಾವೆಗಳನ್ನು ಕಾಣಬಹುದಾಗಿದೆ. ಭಾರತವು ಕೆಲವು ದೊಡ್ಡ ದೊಡ್ಡ ದೇಶಗಳಿಗೆ ಕೈಮಗ್ಗ ಬಟ್ಟೆಗಳನ್ನು ರಫ್ತು ಮಾಡುತ್ತಿದೆ. ಕೈಮಗ್ಗಗಳ ಮೂಲಕ ಸಿದ್ಧವಾಗಿರುವ ಬಟ್ಟೆಗಳಿಗೆ ಇಲ್ಲಿ ಕಡಿಮೆ ಬೆಲೆ ಇದ್ದರೆ, ವಿದೇಶದಲ್ಲಿ ಅವುಗಳಿಗೆ ತುಂಬಾ ಬೇಡಿಕೆಯ ಕಾರಣ ಅಧಿಕ ಬೆಲೆ ಇರುವುದನ್ನು ಕಾಣಬಹುದು.

**ನೇಕಾರ ಸಮುದಾಯಗಳು:**

ಆರಂಭದಲ್ಲಿ ಆಸಕ್ತಿಗಾಗಿ ನೇಕಾರಿಕೆಯನ್ನು ಮಾಡುತ್ತ ಬಂದವರೇ, ಮುಂದೆ ಅದೇ ವೃತ್ತಿಯಾಗಿಸಿಕೊಂಡು ನೇಕಾರರೆನಿಸಿಕೊಂಡರು. ಆದರೆ ಮುಂದೆ ದೇವಾಂಗವೋ, ಪದ್ಮಶಾಲಿಯೋ, ಕುರುಹೀನಶೆಟ್ಟಿಯೋ ಎಂದು ಕರೆದಿದ್ದು, ಅದರಲ್ಲಿಯೇ ಉಪ ಪಂಗಡಗಳಾಗಿರುವುದನ್ನು ಕಾಣಬಹುದು. ದೇವಾಂಗ,

ಪದ್ಮಶಾಲಿ, ಕುರುಹೀನಶೆಟ್ಟಿ, ಸ್ವಕುಳಸಾಲಿ, ಪಟ್ಟಶಾಲಿ, ತೊಗಟವೀರ, ಹೀಗೆ 6 ರೀತಿಯ ಪಂಗಡಗಳನ್ನು ನೋಡಬಹುದು. ಇವರ ಆಚರಣೆಗಳು, ಧಾರ್ಮಿಕ ಕಾರ್ಯಗಳು ಒಂದೇ ರೀತಿಯಲ್ಲಿರುವುದು ಸಹಜ. ಪ್ರಸ್ತುತ ದಿನಮಾನದಲ್ಲಿ ಕುರುಬರು, ಮುಸ್ಲಿಮರು, ಕ್ರೈಸ್ತರು, ಹರಿಜನರು ಹೀಗೆ ನೇಕಾರ ವೃತ್ತಿಯನ್ನು ಅವಲಂಬಿಸಿಕೊಂಡು ಬಂದಿರುವುದನ್ನು ಕಾಣಲಾಗಿದೆ. ಕೆಲವರಿಗೆ ಈ ನೇಕಾರಿಕೆ ವೃತ್ತಿಯು ಕುಲ ವೃತ್ತಿಯಾದರೆ, ಇನ್ನೂ ಕೆಲವರಿಗೆ ಇದು ಉಪಜೀವನ ವೃತ್ತಿ ಆಗಿರುವುದನ್ನು ನೋಡಲಾಗಿದೆ. ಭಾರತ ದೇಶದಲ್ಲಿ ಹಲವಾರು ರೀತಿಯ ಕರಕುಶಲ ಮತ್ತು ಸಣ್ಣ ಕೈಗಾರಿಕೆಗಳನ್ನು ಕಾಣಬಹುದು. ಭಾರತೀಯ ಕೈಮಗ್ಗವು ಜನರಲ್ಲಿ ಸೆಳೆತ ಮೂಡಿಸಿದೆ. ಪ್ರಾಚೀನ ಕಾಲದಿಂದ ನೇಕಾರಿಕೆಯು ಒಂದು ಕಲೆಯಾಗಿ ಬೆಳೆದಿದೆ. ಮನೆಗಳ ಸದಸ್ಯರನ್ನು ಆಧರಿಸಿ ಜನರು ಕೈಮಗ್ಗಗಳನ್ನು ಹಾಕಿಕೊಂಡಿದ್ದಾರೆ. ಕೈಮಗ್ಗ ನೇಕಾರರ ಜೀವನವು ಪ್ರಸ್ತುತ ದಿನಮಾನದಲ್ಲಿ ಶೋಚನೀಯ ಮಟ್ಟ ತಲುಪುತ್ತಿದೆ. ದುಡಿದ ಕೆಲಸಕ್ಕೆ ಸರಿಯಾದ ಸಂಬಳ ಸಿಗದೆ ಇರುವ ಕಾರಣಕ್ಕೆ ನೇಕಾರರು ಈ ವೃತ್ತಿಯನ್ನು ಬಿಡುವ ಹಂತಕ್ಕೆ ತಲುಪಿದ್ದಾರೆ.

ಕರ್ನಾಟಕ ಜವಳಿ ಉದ್ಯಮ ಇಲಾಖೆಯು ನೇಕಾರರಿಗೆ ಕೆಲವು ರೀತಿಯ ಸವಲತ್ತುಗಳನ್ನು ನೀಡಿದೆ ಮತ್ತು ಉದ್ಯೋಗವನ್ನು ಸೃಷ್ಟಿಸುವ ಕಾರ್ಯವನ್ನು ಮಾಡುತ್ತಿದೆ. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಪ್ರಕಾರ, ಪ್ರಾಥಮಿಕ ಕೈಮಗ್ಗ ಹಾಗೂ ನೇಕಾರ ಸಹಕಾರ ಸಂಘಗಳು ಆರ್ಥಿಕ ನೆರವನ್ನು ನೀಡುತ್ತಿವೆ. ನಬಾರ್ಡ್ ಯೋಜನೆಯಲ್ಲಿ ದುಡಿಯುವವರಿಗೆ ಬಂಡವಾಳ ಸಾಲವನ್ನು ನೀಡುತ್ತಿವೆ ಮತ್ತು ನೇಕಾರ ಕುಟುಂಬಗಳಿಗೆ ವೈದ್ಯಕೀಯ ಸೌಲಭ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಪ್ರಸ್ತುತ ಸರ್ಕಾರ ನೀಡುತ್ತಿರುವುದನ್ನು ಕಾಣಬಹುದಾಗಿದೆ.

**ಬನಹಟ್ಟಿಯ ಕೈಮಗ್ಗಗಳು:**

ಪ್ರಾಚೀನ ಕಾಲದಿಂದಲೂ ಕೈಮಗ್ಗವು ಭಾರತದ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ತೋರಿಸುತ್ತದೆ. ಭಾರತೀಯ ನೇಕಾರರು ಅದ್ಭುತವಾಗಿ ನೇಯ್ಗೆ ಮಾಡುವ ಮೂಲಕ ಬಟ್ಟೆಗಳಿಗೆ ವಿಭಿನ್ನ ವಿನ್ಯಾಸಗಳನ್ನು ನೀಡಿದ್ದಾರೆ. ಕೈಮಗ್ಗದ ಸೀರೆಗಳಿಗೆ ಪ್ರಸ್ತುತ ಕಾಲದಲ್ಲಿ ಅತಿ ಹೆಚ್ಚಾಗಿ ಬೇಡಿಕೆ ಇರುವುದನ್ನು ಗಮನಿಸಬಹುದು. ಬನಹಟ್ಟಿಯ ಕೈಮಗ್ಗದ ಸೀರೆಗಳನ್ನು ಬೆಂಗಳೂರು, ಧಾರವಾಡ, ಮಂಗಳೂರು, ಗುಲ್ಬರ್ಗಾದಂತಹ ದೊಡ್ಡ ಮಾರುಕಟ್ಟೆಗೆ ಮತ್ತು ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಕೇರಳಗಳಿಗೆ ರಫ್ತು ಮಾಡುತ್ತಾರೆ. ಹತ್ತಿ, ರೇಷ್ಮೆ, ಉಣ್ಣೆ ಮತ್ತು ಲೆನಿನ್ ಕೈಮಗ್ಗ ನೇಯ್ಗೆಯ ಕಚ್ಚಾ ವಸ್ತುಗಳ ಅತ್ಯಂತ ಜನಪ್ರಿಯ ಆಯ್ಕೆಗಳಾಗಿವೆ. ಭಾರತದ ಪ್ರತಿಯೊಂದು ಪ್ರದೇಶವು ತನ್ನ ವಿಶಿಷ್ಟವಾದ ಕೈಮಗ್ಗ ಉತ್ಪನ್ನಗಳಿಗೆ ವಿಭಿನ್ನ ಕಚ್ಚಾ

ವಸ್ತು ಬಳಸುತ್ತದೆ.

**ಕಚ್ಚಾ ವಸ್ತುವನ್ನು ನೂಲು ಆಗಿ ಪರಿವರ್ತನೆ ಮಾಡುವುದು:** ನೂಲಿನ ಗಿರಣಿಗಳಲ್ಲಿ ಕಚ್ಚಾ ವಸ್ತುಗಳನ್ನು ನೂಲಾಗಿ ಪರಿವರ್ತನೆ ಮಾಡುತ್ತಾರೆ. ಆ ಸಣ್ಣ ಎಳೆಗಳನ್ನು ಚಿಕ್ಕ ಸಿಲಿಂಡರ್ ಆಕೃತಿಗೆ ಸುತ್ತಿಕೊಳ್ಳುವುದು. ಯಾವುದೇ ರೀತಿಯ ಸಣ್ಣ ಎಳೆಗಳು ಎಳೆದಂತೆ ಸುತ್ತಿಕೊಳ್ಳಬೇಕು. ಅವುಗಳನ್ನು ಉತ್ತಮಗೊಳಿಸಿದ ನಂತರ ಹತ್ತಿಯ ನೂಲುಗಳನ್ನು ಸ್ಕಿನ್ ಗಳಾಗಿ ಜೋಡಿಸಲಾಗುತ್ತದೆ ಮತ್ತು ಒಣಗಲು ಬಿಡಲಾಗುತ್ತದೆ.

**ನೂಲಿಗೆ ಬಣ್ಣ ಹಾಕುವುದು:** ನೂಲುಗಳು ಮೊದಲಿಗೆ ನೈಸರ್ಗಿಕ ಬಿಳಿ ಬಣ್ಣದಲ್ಲಿರುತ್ತವೆ. ಅವುಗಳಿಗೆ ನಮಗೆ ಬೇಕಾದ ಬಣ್ಣವನ್ನು ಹಾಕಬೇಕು. ಅಂದರೆ, ನೈಸರ್ಗಿಕ ಗಿಡಮೂಲಿಕೆ ಬಣ್ಣ ಅಥವಾ ರಾಸಾಯನಿಕ ಬಣ್ಣವನ್ನು ತೆಗೆದುಕೊಂಡು ಕಾಯಿಸಿದ ನೀರಿನಲ್ಲಿ ಬಣ್ಣವನ್ನು ಹಾಕಬೇಕು. ಅದಕ್ಕಿಂತ ಮೊದಲು ನೂಲನ್ನು ತಣ್ಣಗೆ ಇರುವ ನೀರಿನಲ್ಲಿ ಅದ್ದಬೇಕು. ನಂತರ ಕುದಿಯುತ್ತಿರುವ ಬಣ್ಣದ ಪಾತ್ರೆಯಲ್ಲಿ ನೂಲನ್ನು ಅದ್ದಿ ಉಪ್ಪು ಹಾಕಿ ಮತ್ತೆ ಕುದಿಸುತ್ತಾರೆ. ನಂತರ ತಣ್ಣಗಿರುವ ನೀರಿನಲ್ಲಿ ಅದ್ದಿ ನೂಲನ್ನು ಸಂಪೂರ್ಣವಾಗಿ ಹಿಂಡಿ ಬಿಸಿಲಿನಲ್ಲಿ ಒಣಹಾಕುತ್ತಾರೆ.

**ಭೀಮ್ ಮತ್ತು ದೊಡ್ಡ ರೀಲ್‌ಗಳಿಗೆ ನೂಲು ಸುತ್ತುವುದು:** ಬಟ್ಟೆ ನೇಯುವ ಸಲುವಾಗಿ ನೂಲನ್ನು ಭೀಮ್ ಮತ್ತು ರೀಲ್‌ಗಳಿಗೆ ಸುತ್ತಿಕೊಂಡು, ಭೀಮ್‌ನಲ್ಲಿರುವ ದಾರವನ್ನು ಎಳೆಎಳೆಯಾಗಿ ಮಗ್ಗದ ಜಾಲರಿಯಲ್ಲಿರುವ ರಂಧ್ರಗಳಿಗೆ ಒಂದೊಂದಾಗಿ ಪೋಣಿಸಬೇಕು. ಈ ಜಾಲರಿಯಲ್ಲಿ ಕನಿಷ್ಠ 3000 ರಂಧ್ರಗಳಿರುತ್ತವೆ. ಜಾಲರಿಯಲ್ಲಿ ದಾರ ಪೋಣಿಸಲು 2 ದಿನ ಬೇಕಾಗುತ್ತದೆ.

ಬಾಬಿನ್ ಇದೊಂದು ಮಗ್ಗದ ಭಾಗವಾಗಿದ್ದು, ದಾರವನ್ನು ಚರಕದ ಸಹಾಯದಿಂದ ಬಾಬಿನ್‌ಗೆ ಸುತ್ತಿಕೊಂಡು ಲಾಳಿಯಲ್ಲಿ ಬಾಬಿನ್ ಅನ್ನು ಹಾಕಿಕೊಳ್ಳುತ್ತಾರೆ. ನಂತರ ಲಾಳಿಯ ರಂಧ್ರಗಳಿಂದ ದಾರದ ಎಳೆ ಪೋಣಿಸಿ ಹೊರತೆಗೆದು ಈ ಉಪಕರಣವನ್ನು ಕೈಮಗ್ಗಕ್ಕೆ ಹಾಕುತ್ತಾರೆ. ನಂತರದಲ್ಲಿ ಕೈಮಗ್ಗವನ್ನು ಕಾಲುಗಳಿಂದ ತುಳಿದು, ಮಗ್ಗದಲ್ಲಿರುವ ದಾರವನ್ನು ಕೈಯಿಂದ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಎಳೆದಾಗ ಮಗ್ಗದ ಚಕ್ರವು ತಿರುಗುತ್ತದೆ. ಈ ಚಕ್ರಕ್ಕೆ ನೇರವಾದ ಕಬ್ಬಿಣದ ಸರಳನ್ನು ಜೋಡಿಸಿರುತ್ತಾರೆ. ಚಕ್ರ ತಿರುಗಿದಾಗ ಮಗ್ಗದ ಕೆಲಸ ಆರಂಭವಾಗಿ ಸೀರೆಯು ತಯಾರಾಗುತ್ತದೆ.

**ಕೈಮಗ್ಗದಿಂದ ಸೀರೆ ತಯಾರಿಸುವ ವಿಧಾನಗಳು:**

1. ಕಚ್ಚಾ ವಸ್ತುಗಳಿಂದ ನೂಲು ಪರಿವರ್ತನೆ

2. ನೂಲುಗಳ ಒಣಗುವಿಕೆ
3. ನೂಲುಗಳಿಗೆ ಬಣ್ಣ ಹಾಕುವುದು (ನೈಸರ್ಗಿಕ/ರಾಸಾಯನಿಕ ಬಣ್ಣ)
4. ನೂಲನ್ನು ಚರಕದಿಂದ ಕಡಿಗೆಗೆ ಸುತ್ತಿಕೊಳ್ಳುವುದು
5. ಭೀಮ್‌ಗೆ ಸುತ್ತಿದ ನೂಲಿನ ಎಳೆಯನ್ನು ಮಗ್ಗಕ್ಕೆ ಜೋಡಿಸುವುದು
6. ಕೈಮಗ್ಗದಲ್ಲಿ ಬಟ್ಟೆ ನೇಯುವುದು.

ಬನಹಟ್ಟಿಯಲ್ಲಿ ಸುಮಾರು 3500 ನೇಕಾರ ಕುಟುಂಬಗಳಿವೆ. ಒಬ್ಬ ಕೈಮಗ್ಗ ನೇಕಾರನು ಒಂದು ಸೀರೆಯನ್ನು ತಯಾರಿಸಲು ಆತನಿಗೆ ಎರಡು ದಿನ ಬೇಕಾಗುತ್ತದೆ. ಬನಹಟ್ಟಿಯಲ್ಲಿ ಮೊದಲಿಗೆ 2000 ಕೈಮಗ್ಗಗಳಿದ್ದವು. ಆದರೆ, ಪ್ರಸ್ತುತವಾಗಿ 875 ಕೈಮಗ್ಗ ಮಾತ್ರ ಇವೆ. ಏಕೆಂದರೆ, ಇವುಗಳಿಂದ ಕೆಲಸವು ತೀವ್ರವಾಗದೇ ಮತ್ತು ಶ್ರಮಕ್ಕೆ ಬೇಕಾದ ಕೂಲಿಯು ಸಿಗದಿರುವುದು ಇದಕ್ಕೆ ಕಾರಣ. ಇದರಿಂದ ನೇಕಾರರು ವಿದ್ಯುತ್ ಮಗ್ಗಗಳಿಗೆ ಮಾರು ಹೋಗುತ್ತಿದ್ದಾರೆ. ಬನಹಟ್ಟಿಯಲ್ಲಿ ವಿದ್ಯುತ್ ಮಗ್ಗಗಳ ಸಂಖ್ಯೆ ಪ್ರಸ್ತುತವಾಗಿ 7000 ಇದೆ. ಈ ವಿದ್ಯುತ್ ಮಗ್ಗಗಳಿಂದ ಒಬ್ಬ ನೇಕಾರ ದಿನಕ್ಕೆ 5 ಸೀರೆಗಳನ್ನು ನೇಯ್ಗೆ ಮಾಡಬಹುದು. ಆತನಿಗೆ ಕೂಲಿ 1000 ರೂ. ಇದೆ. ಬನಹಟ್ಟಿಯಲ್ಲಿ ಕಾಟನ್ ಮತ್ತು ಪಾಲಿಸ್ಟರ್ ಸೀರೆಗಳು ತಯಾರಾಗುತ್ತವೆ.

ಬನಹಟ್ಟಿಯಲ್ಲಿ ಹಲವಾರು ರೀತಿಯ ಅಳತೆಯ ಸೀರೆಗಳನ್ನು ನೇಯ್ಗೆ ಮಾಡುತ್ತಾರೆ. 5.5 ಮೀಟರ್, 7.4 ಮೀಟರ್, 8.20 ಮೀಟರ್ ಅಳತೆಯ ಸೀರೆಗಳನ್ನು ನೇಯ್ಗೆ ಮಾಡುತ್ತಾರೆ. ಅದರಲ್ಲಿ 8.20 ಮೀಟರ್ ಅಳತೆಯ ಸೀರೆಯನ್ನು ಧರಿಸುವ ಮಹಿಳೆಯರು ಅಪರೂಪ ಎಂದು ನೇಕಾರರು ತಿಳಿಸಿದ್ದಾರೆ. ಅಲ್ಲದೆ, ಬನಹಟ್ಟಿಯ ಸೀರೆಗಳಲ್ಲಿ ಹಲವಾರು ರೀತಿಯ ಅಂಚಿನ ವಿನ್ಯಾಸದ ಸೀರೆ ಮತ್ತು ನಕ್ಷತ್ರ ಚಿತ್ರ, ಚೆಸ್ (ಚದುರಂಗ) ವಿನ್ಯಾಸ, ಅಲ್ಲದೆ 200ಕ್ಕೂ ಅಧಿಕ ವಿನ್ಯಾಸದ ಸೀರೆಗಳು ತಯಾರಾಗುತ್ತವೆ.

ಬನಹಟ್ಟಿಯಲ್ಲಿ ಒಟ್ಟು ನೇಕಾರ ಮತದಾರರು 33147 ಇದ್ದು, ಅದರಲ್ಲಿ ಪುರುಷರು 16587 ಮತ್ತು ಮಹಿಳೆಯರು 16560 ಇದ್ದಾರೆ. ನೇಕಾರ ಸಮುದಾಯದಲ್ಲಿ ಹಲವಾರು ಪಂಗಡಗಳಿವೆ. ದೇವಾಂಗ, ಕುರುಹಿನ ಶೆಟ್ಟಿ, ಸ್ವಕುಳಸಾಲಿ, ಪದ್ಮಸಾಲಿ, ಶಿವಸಾಮಾಸಾಲಿ, ಪಟ್ಟಸಾಲಿ, ಪಟ್ಟೇಗಾರ, ತೊಗಟವೀರ, ರೊಖಡಿ ನೇಕಾರ, ಮುಂಗಡ ನೇಕಾರ, ಕೂಲಿ ನೇಕಾರ ಈ ರೀತಿಯ ಪಂಗಡಗಳಿವೆ.

**ಬನಹಟ್ಟಿಯಲ್ಲಿರುವ ನೇಕಾರ ಸಹಕಾರಿ ಸಂಘಗಳು:**

1. ಬಸವೇಶ್ವರ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
2. ಕಾಡಸಿದ್ದೇಶ್ವರ ವಿದ್ಯುತ್ ಚಾಲಿತ ಮಗ್ಗಗಳ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
3. ಹರಿಜನ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
4. ಬನಹಟ್ಟಿ ನೇಕಾರ ಸಹಕಾರ ಅಸೋಸಿಯೇಶನ್ ನಿಯಮಿತ, ಬನಹಟ್ಟಿ.

5. ಉದಯ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
6. ಹೊಸೂರ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
7. ಭಾರತ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
8. ಪ್ರಕಾಶ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
9. ಗಜಾನನ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
10. ಶ್ರೀ ಗುರು ನೀಲಕಂಠೇಶ್ವರ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
11. ಡಾ. ಅಲ್ಲಮಾ ಇಕ್ಬಾಲ್ ಪಿ. ಲೂಮ್ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
12. ಶ್ರೀ ಸದಾಶಿವ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
13. ಬನಹಟ್ಟಿ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
14. ಶಿವ ಪಾರ್ವತಿ ಪವರ್ ಲೂಮ್ ಇಂಡಸ್ಟ್ರಿಯಲ್ ಕೋ. ಆಪ್. ನಿಯಮಿತ ಬನಹಟ್ಟಿ.
15. ಲಕ್ಷ್ಮೀ ಸರಸ್ವರಿ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
16. ಶ್ರೀ ಭುವನೇಶ್ವರಿ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
17. ಶಾಖಾಂಬರಿ ವಿದ್ಯುತ್ ಚಾಲಿತ ಮಗ್ಗಗಳ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
18. ರಾಣಿ ಚೆನ್ನಮ್ಮಾ ಮಹಿಳಾ ಕೈಮಗ್ಗ ನೇಕಾರ ವಿದ್ಯುತ್ ಚಾಲಿತ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
19. ದೇವರ ದಾಸಮಯ್ಯ ವಿದ್ಯುತ್ ಚಾಲಿತ ಮಹಿಳಾ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
20. ಕನಕದಾಸ ವಿದ್ಯುತ್ ಮಗ್ಗಗಳ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.
21. ಕೋಹಿನೂರ್ ಅಲ್ಪ ಸಂಖ್ಯಾತರ ವಿದ್ಯುತ್ ಚಾಲಿತ ಮಗ್ಗಗಳ ನೇಕಾರ ಸಹಕಾರಿ ಸಂಘ ನಿಯಮಿತ, ಬನಹಟ್ಟಿ.

**ನೇಕಾರ ಸಹಕಾರಿ ಸಂಘಗಳ ಪಾತ್ರ:**

ಬನಹಟ್ಟಿಯಲ್ಲಿ ಸುಮಾರು 21 ನೇಕಾರ ಸಹಕಾರಿ ಸಂಘಗಳಿವೆ. ಈ ನೇಕಾರ ಸಹಕಾರಿ ಸಂಘಗಳು ಬನಹಟ್ಟಿಯ ಸುತ್ತಲೂ ವ್ಯಾಪ್ತಿಗೆ ಬರುವ ನೇಕಾರರ ಕುಟುಂಬದ ಆರ್ಥಿಕತೆಯ ಬೆನ್ನೆಲುಬಾಗಿ ನಿಂತಿವೆ. ಇವುಗಳಲ್ಲಿ ನೇಕಾರರ ವೃತ್ತಿ ಕೈಗೊಳ್ಳುವವರಿಗೆ ಮಾತ್ರ ಸಾಲ ಮತ್ತು ಆರೋಗ್ಯದ ಸೌಲಭ್ಯಗಳು ದೊರೆಯುತ್ತವೆ. ಬನಹಟ್ಟಿ ನೇಕಾರರ ಸಂಘವು ಹಲವಾರು ಷೇರುಗಳನ್ನು ಒಳಗೊಂಡಿದೆ. ಉದಾಹರಣೆಗೆ, ಭುವನೇಶ್ವರಿ ಸಹಕಾರಿ ಸಂಘವು 450ಕ್ಕೂ ಅಧಿಕ ಷೇರುಗಳನ್ನು ಒಳಗೊಂಡಿದ್ದು, ವಿಶೇಷವಾಗಿ ಮಹಿಳೆಯರೂ ಅತಿ ಹೆಚ್ಚು ಷೇರುಗಳನ್ನು ಹೊಂದಿದ್ದಾರೆ. ನೇಕಾರರು ಸಂಘದಲ್ಲಿ ಷೇರು ಹೊಂದಿದ್ದರೆ ಮಾತ್ರ ಅವರಿಗೆ ಸಾಲವನ್ನು ನೀಡುತ್ತಾರೆ ಹಾಗೂ ಅವರ ಸಾಲವನ್ನು ಪಡೆಯಬೇಕಾದರೆ ಅದಕ್ಕೆ ಪೂರಕವಾದ ದಾಖಲೆಗಳನ್ನು ಒಳಗೊಂಡಿರಬೇಕು. ಸಂಘದಲ್ಲಿ ಒಬ್ಬ ಅಧ್ಯಕ್ಷರು ಮತ್ತು ಸದಸ್ಯರನ್ನು ಒಳಗೊಂಡ

ಒಂದು ಸಮಿತಿ ಇರುತ್ತದೆ. ಪ್ರತಿ ತಿಂಗಳಿಗೊಮ್ಮೆ ಸಭೆಯನ್ನು ಕರೆಯುತ್ತಾರೆ ಮತ್ತು ಪ್ರತಿ 5 ವರ್ಷಗಳಿಗೊಮ್ಮೆ ಚುನಾವಣೆ ನಡೆಯುತ್ತದೆ. ಕೆಲವೊಮ್ಮೆ ಆಯ್ಕೆ ಮಾಡುವ ಪದ್ಧತಿಯನ್ನು ಅನುಸರಿಸುತ್ತಾರೆ. ಸಾಲವನ್ನು ಪಡೆಯಬೇಕಾದರೆ ಜವಳಿ ಇಲಾಖೆಯಿಂದ ನೇಕಾರರ ಪ್ರಮಾಣ ಪತ್ರವಿರಬೇಕು. ಇವರಿಗೆ 10 ಲಕ್ಷದವರೆಗೆ ಸಾಲ ಮತ್ತು ಸಹಾಯಧನದ ಸೌಲಭ್ಯವೂ ಸಹ ಇದೆ.

**ಸಹಕಾರಿ ಸಂಘದ ಗುರಿ ಮತ್ತು ಉದ್ದೇಶಗಳು:**

1. ನೇಕಾರರ ಆರ್ಥಿಕ ಸ್ಥಿತಿ ಸುಧಾರಿಸುವುದು.
2. ಸದಸ್ಯರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ನೀಡುವುದು.
3. ನೇಕಾರರು ಉತ್ಪಾದಿಸಿದ ವಸ್ತುಗಳಿಗೆ ನ್ಯಾಯಯುತ ಬೆಲೆ ಸಿಗುವಂತೆ ಮಾಡುವುದು.
4. ಕೈಗಾರಿಕೆಗಳಲ್ಲಿ ಯಂತ್ರೋಪಕರಣಗಳನ್ನು ಖರೀದಿಸಲು ಸಾಲ ನೀಡುವುದು.
5. ನೇಕಾರರ ಕೂಲಿಯು ದೊರೆಯುವಂತೆ ಮಾಡುವುದು.
6. ಕಚ್ಚಾ ವಸ್ತುಗಳಾದ ರೇಷ್ಮೆ, ಹತ್ತಿ ಬೆಳೆಗಾರರನ್ನು ಪ್ರೋತ್ಸಾಹಿಸುವುದು.
7. ನೇಕಾರ ಮಕ್ಕಳಿಗೆ ಜವಳಿ ಇಲಾಖೆಯಿಂದ ವಿದ್ಯಾರ್ಥಿವೇತನ ನೀಡುವುದು.
8. ನೇಕಾರ ಮಕ್ಕಳಿಗೆ ಉನ್ನತ ಶಿಕ್ಷಣ ಪಡೆಯಲು ಪ್ರೋತ್ಸಾಹ ಧನ ನೀಡುವುದು.
9. ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಒದಗಿಸಲು ಸಹಾಯ ಮಾಡುವುದು.
10. ನೇಕಾರರ ಜೀವನಮಟ್ಟ ಸುಧಾರಿಸುವುದು.

**ಬನಹಟ್ಟಿ ಕೆ.ಎಚ್.ಡಿ.ಸಿ. ಯ ಇತಿಹಾಸ:**

ಬನಹಟ್ಟಿ ನಗರದಲ್ಲಿ ಕೈಮಗ್ಗವು ಒಂದು ದೊಡ್ಡದಾದ ಪ್ರದೇಶದಲ್ಲಿ ಕಂಡು ಬರುತ್ತದೆ. ಅದಕ್ಕೆ ಕೆ.ಎಚ್.ಡಿ.ಸಿ ಎಂದು ಕರೆಯುತ್ತಾರೆ. ಇದರರ್ಥ ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಶನ್ (Karnataka Handloom Development Corporation) ಎಂದಾಗಿದೆ. ಇದು 1978 ರಲ್ಲಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿ ಇದ್ದಾಗ, 20 ಅಂಶದ ಕಾರ್ಯಕ್ರಮದ ಭಾಗವಾಗಿ, ಆಗಿನ ಕರ್ನಾಟಕದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ. ದೇವರಾಜ್ ಅರಸ್‌ರವರು ಈ ಕಾರ್ಯಕ್ರಮವನ್ನು ಕರ್ನಾಟಕದಾದ್ಯಂತ ಜಾರಿಗೆ ತಂದರು. ಇದು ಬನಹಟ್ಟಿಯಲ್ಲಿ ಸಾಮಾನ್ಯ ಶಕ 07.12.1979 ರಲ್ಲಿ ಸ್ಥಾಪನೆಯಾಗಿದೆ.

1979ರ ಕೆ.ಎಚ್.ಡಿ.ಸಿ ಯ ಅಧ್ಯಕ್ಷರು ವಿ.ವಿ. ಪತ್ತಾರ, ವ್ಯವಸ್ಥಾಪಕ ನಿರ್ದೇಶಕರು ಆರಂಭಿಸಿದರು. ಕೆ.ಎಚ್.ಡಿ.ಸಿ. ಅಡಿಯಲ್ಲಿ ನೇಕಾರರಿಗೆ ಭೂಮಿಯನ್ನು ನೀಡಿ ಅವರಿಗೆ ಮನೆಗಳನ್ನು ಕಟ್ಟಿಕೊಟ್ಟು ಕೈಮಗ್ಗಗಳನ್ನು ಹಾಕಿಕೊಟ್ಟರು.

ಬನಹಟ್ಟಿ ನಗರದಲ್ಲಿ ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗ 3 (ಮೂರು) ಶಿಫ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಆಗ ಬನಹಟ್ಟಿ ನಗರದಲ್ಲಿ ಈ ಕಚೇರಿಯಲ್ಲಿ 3,000 ರಷ್ಟು ಕೈಮಗ್ಗ ಇದ್ದವು ಎಂದು ತಿಳಿದು ಬಂದಿದೆ. ಬನಹಟ್ಟಿಯ ಕೆ.ಎಚ್.ಡಿ.ಸಿ ಕಚೇರಿಯು ಸುಮಾರು 50 ಎಕರೆ ಜಾಗದಿಂದ ಕೂಡಿದೆ. ಈ 50 ಎಕರೆ ಜಾಗವನ್ನು ಹಲವಾರು ಒಳ್ಳೆಯ ಕೆಲಸಗಳಿಗಾಗಿ ಹಂಚಲಾಗಿದೆ:

1. ಒಂದು ಎಕರೆ ಜಾಗದಲ್ಲಿ ಕೆ.ಎಚ್.ಡಿ.ಸಿ ಯ ಕಚೇರಿ ನಿರ್ಮಿಸಲಾಗಿದೆ.
2. 10 ಎಕರೆ ಜಾಗದಲ್ಲಿ ಕೆ.ಎಚ್.ಡಿ.ಸಿ ಯ ನೇಕಾರರಿಗೆ ವಾಸಿಸಲು ಗೃಹಗಳನ್ನು ನಿರ್ಮಿಸಲಾಗಿದೆ ಮತ್ತು ಹಂಚಿಕೆ ಮಾಡಲಾಗಿದೆ.
3. ಎರಡು ಎಕರೆ ಜಾಗದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸಲು ಶಾಲೆಗಳನ್ನು ಸ್ಥಾಪಿಸಲಾಗಿದೆ.
4. ನಾಲ್ಕು ಎಕರೆ ಜಾಗದಲ್ಲಿ ಜೇಡರ ಸಮುದಾಯದವರಿಗೆ ವರ್ಗಾಯಿಸಲಾಗಿದೆ.
5. 2 ಗುಂಟೆ ಜಾಗವನ್ನು ಶಾದಿ ಮಹಲ್ ನಿರ್ಮಾಣಕ್ಕೆ ನೀಡಲಾಗಿದೆ.

ಈ ಬನಹಟ್ಟಿ ನಗರದ ಕೆ.ಎಚ್.ಡಿ.ಸಿ ಶಾಖೆಯಲ್ಲಿ 1979 ರಿಂದ 2005ರ ವರೆಗೆ ಕೆಲಸವು 3 ಶಿಫ್ಟ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ನಂತರ 2005 ರಿಂದ ಪ್ರಸ್ತುತ ದಿನಗಳವರೆಗೆ ಕೇವಲ ಒಂದು ಶಿಫ್ಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇದರೊಂದಿಗೆ 2010 ರಲ್ಲಿ ನೇಕಾರರು 3,000 ಜನರಿದ್ದರು ಎಂದು ತಿಳಿದು ಬರುತ್ತದೆ. ಪ್ರಸ್ತುತ 2024 ರಲ್ಲಿ 1,400 ಜನ ನೇಕಾರರು ತಮ್ಮ ನೇಕಾರಿಕೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ ಎನ್ನಲಾಗಿದೆ. ಬನಹಟ್ಟಿ ನಗರದ ಉದ್ಯಮವಾದ ಕೈಮಗ್ಗದ ಚರಿತ್ರೆಯ ಒಂದು ಅಧ್ಯಯನದಿಂದ ತಿಳಿದುಬರುವ ಅಂಶವೆಂದರೆ, ಈ ನಗರದಲ್ಲಿ ನೇಕಾರಿಕೆ ಉದ್ಯಮವು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಇಲ್ಲಿ ನೇಕಾರಿಕೆಯ ವೃತ್ತಿಯು ಪುರಾತನ ಕಾಲದಲ್ಲೇ ಪ್ರಾರಂಭವಾಗಿದೆ ಎಂದು ಕಂಡುಬರುತ್ತದೆ.

**ಉಪಸಂಹಾರ:**

ಮಾನವನ ವಿಕಾಸವು ಹಲವಾರು ವಿಸ್ಮಯಗಳನ್ನು ನಮ್ಮ ಮುಂದೆ ಇಡುತ್ತಲೇ ಹೋಗುತ್ತದೆ. ಅದನ್ನು ವಿಚಾರ ಮಾಡಿಕೊಳ್ಳುವ ಅದಮ್ಯತೆಯಲ್ಲಿ ಮನುಷ್ಯ ಇಂದಿಗೂ ನಿರತನಾಗಿದ್ದಾನೆ. ಈ ಹಿನ್ನೆಲೆಯಲ್ಲಿ ನೇಕಾರಿಕೆಯು ಕೂಡ ಮಾನವ ಕಂಡುಕೊಂಡ ಹೊಸ ಸಿದ್ಧಾಂತವಾಗಿದೆ. ಜೀವನವನ್ನು ಅಭಿವೃದ್ಧಿಪಡಿಸುವ ಹಲವಾರು ವೃತ್ತಿಗಳಿವೆ. ಉದಾಹರಣೆಗೆ, ಕುಂಬಾರನು ಮಣ್ಣಿನಿಂದ ಮಡಕೆ ತಯಾರಿಸಿದರೆ, ಕಮ್ಮಾರನು ಕಬ್ಬಿಣದಿಂದ ಉಪಕರಣ ಮಾಡುತ್ತಾನೆ. ಅದೇ ರೀತಿ, ಹತ್ತಿಯಿಂದ ನೇಕಾರನು ಬಟ್ಟೆಗಳನ್ನು ತಯಾರಿಸಿ ಮನುಷ್ಯನ ಗೌರವವನ್ನು ಕಾಪಾಡುತ್ತಾ ಬಂದಿದ್ದಾನೆ. ಬಟ್ಟೆ

ಗಿರಣಿಗಳಲ್ಲಿ ವಿವಿಧ ಬಟ್ಟೆಗಳು ತಯಾರಾದರೂ, ಕೆಲವು ಬಟ್ಟೆಗಳನ್ನು ಮಗ್ಗದಲ್ಲಿ ಮಾತ್ರ ಮಾಡಲಾಗುತ್ತದೆ. ಇವೆಲ್ಲವನ್ನು ಗಮನಿಸಿದಾಗ, ಜನಪದರು ನೇಕಾರಿಕೆಯನ್ನು ತಮ್ಮ ಬದುಕಿಗಾಗಿ, ಪ್ರಸ್ತುತವಾಗಿಯೂ ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಮುಂದುವರೆಸಿದ್ದರೂ ಸಹ ಅವರು ತಮ್ಮ ಸಂಪ್ರದಾಯಗಳನ್ನು ಬಿಟ್ಟಿಲ್ಲ ಎಂಬುದನ್ನು ಭಾಗಶಃ ಒಪ್ಪಿಕೊಳ್ಳಲೇಬೇಕಾದ ಸಂಗತಿಯಾಗಿದೆ. ನೇಕಾರಿಕೆ ಕೂಡ ಹೀಗೆ ಮಾನವ ಕಂಡುಕೊಂಡ ಒಂದು ಸಿದ್ಧಾಂತವಾಗಿದೆ.

## ಪರಾಮರ್ಶನ ಗ್ರಂಥಗಳು:

1. ಬೆನ್ನೂರ ನಾಗೇಂದ್ರಪ್ಪ ಮಂಜಪ್ಪ, (2024), ಬಾಗಲಕೋಟೆ ಜಿಲ್ಲೆಯ ಜೈನ ಕೇಂದ್ರಗಳು,, ಎಸ್. ಟಿ.ಸಿ. ಕಲಾ, ವಾಣಿಜ್ಯ, ಬಿ.ಬಿ.ಎ, ಬಿ.ಎಸ್.ಸಿ ಮತ್ತು ಸ್ನಾತಕೋತ್ತರ ಕೇಂದ್ರ, ಬನಹಟ್ಟಿ.
2. ಮಹದೇವಪ್ಪ, (2009), ನೇಕಾರ ಸಮಾಜ, ಸಂಸ್ಕೃತಿ, ಆರ್ಥಿಕ ಸ್ಥಿತಿಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಸರಗಣಾಚಾರಿ & ಸಂಗಯ್ಯ ಪ., (2015), ಬಾಗಲಕೋಟೆ ಜಿಲ್ಲೆಯ ನೇಕಾರಿಕೆ ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.